ವಿಷಯ: ಕನ್ನಡ

# ರೂಪಣಾತ್ಮಕ ಪರೀಕ್ಷೆ 1

ಅಂಕಗಳು : ೨೦

ತರಗತಿ: ೧೦ನೇ

ಸಮಯ: ೪೦ ನಿಮಿಷಗಳು

---

**I. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.** **4x1=4**

1. 'ನಿತ್ಯ ' ಇದರ ತದ್ಭವ ರೂಪ.

ಎ) ನೆಚ್ಚ ಬಿ) ನಿತ್ತ

ಸಿ) ನಿಚ್ಚ ಡಿ) ಸತ್ಯ

2. 'ಸೇತುವೆ+ಆಗೋಣ' ಇಲ್ಲಿರುವ ಸಂಧಿ

ಎ) ಆಗಮ ಬಿ) ಆದೇಶ

ಸಿ) ಸವರ್ಣಧೀರ್ಘ ಡಿ) ಗುಣ

3. 'ಬಿರುಗಾಳಿಗೆ' ಇದು ಈ ವಿಭಕ್ತಿ ಪ್ರತ್ಯಯ.

ಎ) ಪ್ರಥಮಾ ಬಿ) ತೃತೀಯಾ

ಸಿ) ಷಷ್ಠೀ ಡಿ) ಚತುರ್ಥೀ

4. 'ಮಾಡುತ್ತಾನೆ' ಈ ಪದದ ನಿಷೇಧಾರ್ಥಕ ರೂಪ.

ಎ) ಮಾಡಲಿ ಬಿ) ಮಾಡನು

ಸಿ) ಮಾಡು ಡಿ) ಮಾಡುವಳು

**II. ಈ ಕೆಳಗಿನ ಪ್ರಶ್ನೆಗಳಿಗೆ ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿ.** **3x2=6**

5. ರಾಮನ ಸ್ವಾಗತಕ್ಕಾಗಿ ಶಬರಿ ಮಾಡಿಕೊಂಡಿದ್ದ ಸಿದ್ಧತೆಗಳೇನು?

6. ಪೊಯೆಟ್ ಕಾರ್ನರ್‌ನಲ್ಲಿ ಯಾವ ಯಾವ ಕವಿಗಳ ಸಮಾಧಿಗಳಿವೆ ?

7. ವಿವೇಕಾನಂದರ ದೃಷ್ಟಿಯಲ್ಲಿ ದೇಶದ ಪ್ರಗತಿ ಸ್ಥಿರವಾಗುವುದು ಯಾವಾಗ ?

**III. ಈ ಕೆಳಗಿನ ಪ್ರಶ್ನೆಗಳಿಗೆ ಐದು ಅಥವಾ ಆರು ವಾಕ್ಯಗಳಲ್ಲಿ ಉತ್ತರಿಸಿ.** **1x3=3**

8. ಹೊಸಗಾಲದ ಹಸುಮಕ್ಕಳನ್ನು ಹಕ್ಕಿ ಹೇಗೆ ಹರಸಿದೆ?

**IV. ಸಂದರ್ಭಸಹಿತ ಸ್ವಾರಸ್ಯವನ್ನು ವಿವರಿಸಿ.** **1x3=3**

9. "ಪ್ರೀತಿಯ ಹಣತೆಯ ಹಚ್ಚೋಣ."

**V. ಈ ಕೆಳಗಿನ ವಿಷಯದ ಮೇಲೆ ಪತ್ರವನ್ನು ಬರೆಯಿರಿ.** **1x4=4**

10. ನಿಮ್ಮನ್ನು ಸರಕಾರಿ ಪ್ರೌಢ ಶಾಲೆ ಗಡಿಕೇಶ್ವಾರ ತಾಲೂಕ ಚಿಂಚೋಳಿ ಜಿಲ್ಲಾ ಕಲಬುರಗಿಯ ೧೦ ನೇ ತರಗತಿಯ ತನುಜಾ ಎಂದು ಭಾವಿಸಿಕೊಂಡು ಗ್ರಾಮ ಪಂಚಾಯಿತಿ ಅಧ್ಯಕ್ಷರಿಗೆ ನಿಮ್ಮ ಊರಿನ ಬೀದಿ ದೀಪಗಳನ್ನು ಸರಿಪಡಿಸುವಂತೆ ಕೋರಿ ಪತ್ರವನ್ನು ಬರೆಯಿರಿ.

Downloaded from scoringtarget.com